SC Criminal 60/2020
PW: 19
CW: 35

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

## SC CRIMINAL :60/2020

**ಫ್ರಾ.ಸಾ. 19**

**ದೋ.ಸಾ. 35**

| | | |
|---|---|---|
| ಸಾಕ್ಷಿಯ ಹೆಸರು | : | ರವಿ ಎಸ್ |
| ತಂದೆಯ ಹೆಸರು | : | ಸಂಜೀವಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಪೊಲೀಸ್ ಇನ್ಸ್‌ಪೆಕ್ಟರ್, ನೆಲಮಂಗಲ ಸಂಚಾರ ಪೊಲೀಸ್ ಠಾಣೆ |
| ವಾಸ | : | ಯಲಹಂಕ |

**ದಿನಾಂಕ 17.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1). ಸೆಪ್ಟೆಂಬರ್–2019 ರಿಂದ ಜನವರಿ–2021 ವರೆಗೆ ಗೌರಿಬಿದನೂರು ವೃತ್ತದ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2). ನನ್ನ ವೃತ್ತ ವ್ಯಾಪ್ತಿಗೆ ಬರುವ ಮಂಚೇನಹಳ್ಳಿ ಪೊಲೀಸ್ ಠಾಣಾ ಕ್ರೈಂ ನಂಃ10/2020 ಕಡತವನ್ನು ದಿನಾಂಕಃ12–01–2020 ರಂದು ಮುಂದಿನ ತನಿಖೆಗಾಗಿ ಚಾಸಾ–34 ಪಿಎಸ್ಐ ರಾಘವೇಂದ್ರರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಮಂಚೇನಹಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ರಾಘವೇಂದ್ರ ಹಾಗೂ ಸಿಬ್ಬಂದಿ ಹೆಚ್.ಸಿ–59 ಶ್ರೀನಿವಾಸಪ್ಪ, ಪಿಸಿ–537 ಆನಂದ್ ರವರ ಜೊತೆಯಲ್ಲಿ ಈ ಪ್ರಕರಣದ ಆರೋಪಿಯ ಪತ್ತೆಗಾಗಿ ತೆರಳಿದ್ದು, ಪ್ರಕರಣದ ಆರೋಪಿ ವೆಂಕಟೇಶನನ್ನು ಬೆಳಿಗ್ಗೆ 11.00 ಗಂಟೆಗೆ ತೊಂಡೇಭಾವಿ ರೈಲ್ವೇ ನಿಲ್ದಾಣದ ಬಳಿ ವಶಕ್ಕೆ ಪಡೆದು ಬೆಳಿಗ್ಗೆ 11.30 ಗಂಟೆಯಲ್ಲಿ ನನ್ನ ವೃತ್ತ ಕಛೇರಿಗೆ ವರದಿಯೊಂದಿಗೆ ಹಾಜರುಪಡಿಸಿರುತ್ತಾರೆ. ಈಗ ಸಾಕ್ಷಿ ಸದರಿ ವರದಿಯನ್ನು ನೋಡಿದ್ದು, ಅದು ಈಗಾಗಲೇ ನಿಪಿ–29 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–29(ಬಿ) ಎಂದು ಗುರುತಿಸಲಾಯಿತು.

3). ನಂತರ ಸದರಿ ಆರೋಪಿಯನ್ನು ವಿಚಾರಣೆ ಮಾಡಲಾಗಿ, ಆತ ಕೃತ್ಯದ ಬಗ್ಗೆ ಒಪ್ಪಿಕೊಂಡಿದ್ದು, ಆರೋಪಿ ಮೇಲೆ ದಸ್ತಗಿರಿ ಕ್ರಮ ಕೈಗೊಂಡು, ಆರೋಪಿಯು ಸ್ವಇಚ್ಛಾ ಹೇಳಿಕೆಯನ್ನು ನೀಡಿದ್ದು, ಸದರಿ ಸ್ವಇಚ್ಛಾ ಹೇಳಿಕೆಯನ್ನುದಾಖಲು ಮಾಡಿರುತ್ತೇನೆ. ಸದರಿ ಸ್ವ-ಇಚ್ಛಾ ಹೇಳಿಕೆಯಲ್ಲಿ ಆರೋಪಿಯು ತಾನು ದಿಃ06.01.2020 ರಂದು ರಾತ್ರಿ 9.30 ಗಂಟೆಯ ಸಮಯದಲ್ಲಿ ತನ್ನ ಸಂಬಂಧಿಯಾದ ರಾಧ, 17 ವರ್ಷ ವಯಸ್ಸುರವರನ್ನು ಕಳೆದ ಎರಡು ವರ್ಷಗಳಿಂದ ಗಾಢವಾಗಿ ಪ್ರೀತಿಸುತ್ತಿದ್ದು, ಇತ್ತೀಚೆಗೆ ರಾಧ ಬೇರೆಯವರಿಂದ ಸಲುಗೆಯಿಂದ ಇರುತ್ತಾಳೆ ಮತ್ತು ನನ್ನಿಂದ ದೂರ ಸರಿಯುತ್ತಿದ್ದಾಳೆ ಎಂದು ನಂಬಿ, ಅವಳ ಮೇಲೆ ಸಂಶಯಪಟ್ಟು, ನನಗೆ ಸಿಗದವಳು ಬೇರೆ ಯಾರಿಗೂ ಸಿಗಬಾರದು ಎಂದು ಹೇಗಾದರೂ ಮಾಡಿ ಸಾಯಿಸಬೇಕು ಎಂದು ತೀರ್ಮಾನಿಸಿ, ಸಾಯಿಸುವುದು ತನ್ನ ಮೇಲೆ ಬರಬಾರದು ಎಂದು ಸಂಚು ಮಾಡಿ, ನೀನು ಬೇರೆಯವರೊಂದಿಗೆ ಮಾತನಾಡುತ್ತಿದ್ದೀಯ, ನನ್ನ ಜೊತೆ ಸುಳ್ಳು ಹೇಳುತ್ತಿದ್ದೀಯ, ನನಗೆ ತಡೆಯಲು ಸಾಧ್ಯವಿಲ್ಲ, ನಾನು ಸಾಯುತ್ತೇನೆ, ನೀನು ಸಾಯುತ್ತೀಯ ಎಂದು ಕೇಳಿದ್ದು, ಅದಕ್ಕೆ ಆಕೆಯು ಒಪ್ಪಿಕೊಂಡಿದ್ದು, ಅದೇ ಸರಿಯಾದ ಸಮಯ ಎಂದು ತೀರ್ಮಾನಿಸಿ, ಇಲಿ ಪಾಶಾಣವನ್ನು ತಂದುಕೊಟ್ಟು, ಕುಡಿಯುವಂತೆ ಮಾಡಿ, ಅವಳು ಒಪ್ಪದಿದ್ದಾಗ ಬಲವಂತವಾಗಿ ತಾನೇ ಕುಡಿಸಿ ಸಾಯಿಸಿದ್ದು, ತನ್ನನ್ನು ಕರೆದುಕೊಂಡು ಹೋದರೆ, ಆಕೆಯನ್ನು ಇಲಿ ಪಾಶಾಣ ಕುಡಿಸಿ ಸಾಯಿಸಿದ ಸ್ಥಳ, ಇಲಿ ಪಾಶಾಣವನ್ನು ಪಡೆದುಕೊಂಡ ಸ್ಥಳ ಹಾಗೂ ತಾನು ಇಲಿ ಪಾಶಾಣವನ್ನು ಕುಡಿದಂತೆ ನಟಿಸಿ ಬಾಯಿಗೆ ಸವರಿಕೊಂಡು, ಮಿಕ್ಕ ಪಾಶಾಣವನ್ನು ಎಸೆದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿ ಸ್ವಇಚ್ಛಾ ಹೇಳಿಕೆಯನ್ನು ನೀಡಿರುತ್ತಾನೆ. ಈಗ ಸಾಕ್ಷಿ ಸದರಿ ಸ್ವಇಚ್ಛಾ ಹೇಳಿಕೆಯ ಭಾಗವನ್ನು ನೋಡಿದ್ದು, ಅದನ್ನು ನಿಪಿ-31 ಎಂದು ಗುರುತಿಸಲಾಯಿತು.

4). ಆರೋಪಿಯನ್ನು ದಸ್ತಗಿರಿ ಮಾಡುವ ಸಮಯದಲ್ಲಿ ಆತನ ಬಳಿ ಒಂದು ಸ್ಯಾಮ್ ಸಂಗ್ ಸ್ಮಾರ್ಟ್ ಮೊಬೈಲ್ ಇದ್ದು, ಅದರಲ್ಲಿ ಕೃತ್ಯಕ್ಕೆ ಸಂಬಂಧಪಟ್ಟ ಸಾಕ್ಷಿಗಳು ಸಿಗಬಹುದು ಎಂದು ಅದನ್ನು ಅಮಾನತ್ತುಪಡಿಸಿಕೊಳ್ಳುವ ಸಲುವಾಗಿ ಪಂಚಾಯತಿದಾರರಾದ ಫಾರುಕ್ ಪಾಶ ಮತ್ತು ಗಂಗಾಧರ್ ರವರನ್ನು ಕಛೇರಿಗೆ ಕರೆಯಿಸಿಕೊಂಡು ತನಿಖೆಗೆ ಸಹಕರಿಸಲು ನೋಟೀಸ್ಸನ್ನು ನೀಡಿದ್ದು, ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ. ಆರೋಪಿಯು ತನ್ನ ಬಳಿ ಇದ್ದ ಮೊಬೈಲ್ ಫೋನನ್ನು ಪಂಚರ ಸಮಕ್ಷಮ ಹಾಜರುಪಡಿಸಿದ್ದು, ಅದು ಸ್ಯಾಮ್ ಸಂಗ್ ಕಂಪನಿಯಮೊಬೈಲ್ ಆಗಿದ್ದು, ಅದರ ಮುಂಭಾಗ ಕಪ್ಪುಬಣ್ಣ ಹಾಗೂ ಹಿಂಭಾಗ ನೀಲಿ ಬಣ್ಣದಿಂದ ಕೂಡಿದ್ದು, ಅದರ ಫೋಟೋವನ್ನು ತೆಗೆದುಕೊಂಡಿರುತ್ತೇನೆ. ಅದನ್ನು ಆರೋಪಿಗೆ ಓಪನ್ ಮಾಡಲು ತಿಳಿಸಿದಾಗ ಆರೋಪಿಯು ತನ್ನ ಫ್ರಿಂಗರ್ ಪ್ರಿಂಟ್ ನಿಂದ ತೆರೆದಿದ್ದು, ನಂತರ 2589 ನಂಬರನ್ನು ಒತ್ತಿ OK ಬಟನ್ ಒತ್ತಿದಾಗ ಮೊಬೈಲ್ ಫೋನ್ ಓಪನ್ ಆಗಿರುತ್ತದೆ. ಸದರಿ ಮೊಬೈಲ್ ಫೋನಿನಲ್ಲಿ 29 ಅಪ್ಲೀಕೇಶನ್ ಗಳು ಇರುತ್ತವೆ. ಅದನ್ನು ಫೋಟೋ ತೆಗೆಯಲಾಯಿತು. ಸದರಿ ಫೋನ್ ನ ಫೋಟೋ ಗ್ಯಾಲರಿಯನ್ನು ತೆರೆದು ನೋಡಲಾಗಿ ಅದರಲ್ಲಿ 8 ಫೋಟೋಗಳು ಹಾಗೂ 6 ವೀಡಿಯೋಗಳಿದ್ದು, ಅವುಗಳು ಪ್ರಕರಣಕ್ಕೆ ಸಂಬಂಧಪಟ್ಟಿರುವುದಿಲ್ಲ. ನಂತರ ವಾಟ್ಸಪ್ ಮೆಸೇಜನ್ ಓಪನ್ ಮಾಡಿ ನೋಡಲಾಗಿ ಒಟ್ಟು 306 ಫೋಟೋಗಳು ಇದ್ದು, ಸದರಿ ಫೋಟೋಗಳನ್ನು ಪರಿಶೀಲಿಸಲಾಗಿ ಅವುಗಳು ಈ ಪ್ರಕರಣಕ್ಕೆ ಸಂಬಂಧಪಟ್ಟಿರುವುದಿಲ್ಲ. ನಂತರ ಬ್ಯಾಕ್ ಹೋಗಿ, ಎಡಗಡೆಗೆ ಸ್ವೈಪ್ ವಾಡಲಾಗಿ ಅದರಲ್ಲಿ 18 ಅಪ್ಲಿಕೇಶನ್ ಇದ್ದು, ಅದರಲ್ಲಿ ಒಂದು ಫೋಟೋಸ್ ಎಂಬ ಅಪ್ಲಿಕೇಶನ್ ಇದ್ದು, ಅದರಲ್ಲಿ 31-12-2019 ರಲ್ಲಿ ಒಟ್ಟು 18 ಫೋಟೋಗಳಿದ್ದು, ಅದರಲ್ಲಿ ಕುಮಾರಿ ರಾಧ ಮತ್ತು ಆರೋಪಿ ವೆಂಕಟೇಶ್ ಇಬ್ಬರು ಇರುವ 11 ಫೋಟೋಗಳಿದ್ದು, ಸದರಿ 11 ಫೋಟೋಗಳಲ್ಲಿ ರಾಧ ಶಾಲೆಯ ಸಮವಸ್ತ್ರದಲ್ಲಿರುತ್ತಾಳೆ. ನಂತರ 19-12-2019 ರಲ್ಲಿ ಎಂಟು

ಫೊಟೋಗಳಿದ್ದು ಸದರಿ ಎಂಟು ಫೋಟೋಗಳಲ್ಲಿ ಆರೋಪಿ ವೆಂಕಟೇಶ್ ಮತ್ತು ಮೃತ ಬಾಲಕಿ ಕುಮಾರಿ ರಾಧ ಇರುತ್ತಾರೆ. ನಂತರ 03-12-2019 ರಲ್ಲಿ ಒಟ್ಟು 11 ಫೋಟೋಗಳಿದ್ದು ಅದರಲ್ಲಿ ಆರೋಪಿ ಹಾಗೂ ರಾಧ ಇಬ್ಬರು ಜೊತೆಯಲ್ಲಿ ಇರುವ ಐದು ಫೋಟೋಗಳು, ರಾಧ ಒಬ್ಬಳೇ ಇರುವ ಮೂರು ಫೋಟೋಗಳು ಹಾಗೂ ಆರೋಪಿ ವೆಂಕಟೇಶ್ ಇರುವ ಒಂದು ಫೋಟೋ ಇದ್ದು, ಉಳಿದ ಎರಡು ಬೇರೆ ಫೋಟೋಗಳಾಗಿರುತ್ತವೆ. ನಂತರ ದಿಃ28-12-2019 ರಲ್ಲಿ ಎರಡು ಫೋಟೋಗಳಿದ್ದು, ಅವುಗಳಲ್ಲಿ ಮೃತ ರಾಧ ಮತ್ತು ಆರೋಪಿ ವೆಂಕಟೇಶ್‌ರವರು ಮುತ್ತು ಕೊಡುತ್ತಿರುವ ಫೋಟೋ ಮತ್ತು ಇನ್ನೊಂದು ಆರೋಪಿ ಮತ್ತು ರಾಧ ಇರುವ ಫೋಟೋ ಆಗಿರುತ್ತದೆ. ದಿಃ27-12-2019 ರಲ್ಲಿ ಆರೋಪಿ ವೆಂಕಟೇಶ್ ಮತ್ತು ಮೃತ ರಾಧ ಇರುವ ಫೋಟೋ ಇದ್ದು, ಅವುಗಳು ತನಿಖೆಗೆ ಅವಶ್ಯಕತೆ ಇದ್ದರಿಂದ ಪ್ರಿಂಟ್ ತೆಗೆಯಿಸಲು ಗುರುತಿಸಲಾಯಿತು. ಪಂಚರಲ್ಲಿ ಒಬ್ಬರಾದ ಫಾರುಕ್ ಪಾಶರವರು ಮೊಬೈಲ್ ಟೆಕ್ನಿಷಿಯನ್ ಆಗಿದ್ದು, ಸದರಿ ಫೋಟೋಗಳು ಈಗಾಗಲೇ ಡಿಲೀಟ್ ಆಗಿದ್ದು, ಗೂಗಲ್ ಡ್ರೈವ್ ನಲ್ಲಿ ಸೇವ್ ಆಗಿದ್ದು, ಸದರಿ ಫೋಟೋಗಳನ್ನು ಇ-ಮೇಲ್ ಐಡಿ ಮತ್ತು ಪಾಸ್ವರ್ಡ್ ಇದ್ದರೆ ಫೊಟೋಗಳನ್ನು ರಿಕವರಿ ಮಾಡಬಹುದು ಎಂದು ಹೇಳಿರುತ್ತಾರೆ. ನಂತರ ಆರೋಪಿಯ ಇ-ಮೇಲ್ ಐಡಿ ಹಾಗೂ ಪಾಸ್ವರ್ಡ್ ಬಗ್ಗೆ ಕೇಳಲಾಗಿ ಆರೋಪಿಯು ತನ್ನ ಇ-ಮೇಲ್ ಐಡಿ venkateshvenki1996vr@gmail.com ಹಾಗೂ ಪಾಸ್ವರ್ಡ್ 9108913538 ಆಗಿದ್ದು, ಸದರಿ ಫೋಟೋಗಳನ್ನು ಎರಡು ತಿಂಗಳ ಹಿಂದೆ ಡಿಲೀಟ್ ಮಾಡಿರುತ್ತೇನೆ ಎಂದು ತಿಳಿಸಿರುತ್ತಾರೆ. ನಂತರ ಫೋಟೋಸ್ ಅಪ್ಲಿಕೇಶನ್ ಅನ್ನು ಕ್ಲೋಸ್ ಮಾಡಿ ಬ್ಯಾಕ್ ಬಟನ್ ಪ್ರೆಸ್ ಮಾಡಿ ನಂತರ ಬ್ಯಾಕ್ ಬಂದು ಬಲಗಡೆಗೆ ಸ್ವೈಪ್ ಮಾಡಿದ್ದು, ಸ್ಯಾಮ್ಸಂಗ್ ಅಪ್ಲಿಕೇಶನ್ ನ್ನು ಓಪನ್ ಮಾಡಿ ನೋಡಲಾಗಿ, ಫೋನ್, ಮೆಸೇಜ್, ಮೈಫೈಲ್ಸ್ ಮತ್ತು ರೇಡಿಯೋ ಎಂಬ ನಾಲ್ಕು ಅಪ್ಲಿಕೇಶನ್ ಗಳು ಇರುತ್ತವೆ. ಅದರ

ಫೋಟೋಗಳನ್ನು ತೆಗೆಯಲಾಯಿತು. ಅದರಲ್ಲಿ ಮೈ ಫೈಲ್ಸ್ ಅಪ್ಲಿಕೇಶನ್ ನ್ನು ಓಪನ್ ಮಾಡಿ ನೋಡಲಾಗಿ, ಅದರಲ್ಲಿ ರಿಸೇಂಟ್ ಫೈಲ್ಸ್ ಇದ್ದು, ಅದರಲ್ಲಿ 6 ಅಪ್ಲಿಕೇಶನ್ಸ್ ಇದ್ದು, ಇಮೇಜಸ್, ವಿಡಿಯೋ, ಆಡಿಯೋ, ಡಾಕ್ಯುಮೆಂಟ್ಸ್, ಡೌನ್ಲೋಡ್ಸ್ ಇನ್ಸ್ಟಾಲೇಶನ್ ಫೈಲ್ಸ್ ಹಾಗೂ ಅಪ್ಲಿಕೇಶನ್ ಇರುತ್ತದೆ. ಅದರ ಕೆಳಗೆ Internal Storage ಇದ್ದು, ಅದರ ಕೆಳಗೆ 21.30 GB / 32.00GB ಎಂದು ಇರುತ್ತದೆ. ಅದರ ಫೋಟೋವನ್ನು ತೆಗೆಯಲಾಯಿತು. ನಂತರ ಆಡಿಯೋ ಅಪ್ಲಿಕೇಶನ್ ಓಪನ್ ಮಾಡಿ ನೋಡಲಾಗಿ ಆಡಿಯೋ 1.90 GB ಎಂದು ಇದ್ದು, ಅದರ ಕೆಳಗೆ Call956whatsapp business audio1, Whatsappa business audio1, Music1 ಇರುತ್ತದೆ, ಅದರ ಫೋಟೋ ತೆಗೆಯಲಾಯಿತು. ನಂತರ Call956 ಎಂದು ಇದ್ದುದನ್ನು ಕ್ಲಿಕ್ ಮಾಡಲಾಗಿ, ಅದರಲ್ಲಿ ದಿಃ09 ನೇ ಜನವರಿ 4:20 P.M ರ ಸಮಯದಲ್ಲಿ ಮಾತನಾಡಿರುವ ಆಡಿಯೋ ಕ್ಲಿಪ್ ಇರುತ್ತದೆ. ಅದರ ಫೋಟೋವನ್ನು ತೆಗೆಯಲಾಯಿತು. ಆರೋಪಿಯನ್ನು ಮೃತ ರಾಧಳಿಗೆ ಕರೆ ಮಾಡಿದ ದಿನಾಂಕವನ್ನು ಕೇಳಲಾಗಿ ಸದರಿ ಆರೋಪಿಯು ದಿಃ06-01-2020 ರಂದು ಮೊದಲಿಗೆ ಕರೆ ಮಾಡಿದ ಸಮಯ 3.30 ಗಂಟೆ ಹಾಗೂ ಕೊನೆಯದಾಗಿ ರಾತ್ರಿ 9.30 ಗಂಟೆಯ ವರೆಗೆ ಕಾಲ್ ಮಾಡಿ ಮಾತನಾಡಿರುವ ಬಗ್ಗೆ ತಿಳಿಸಿರುತ್ತಾನೆ.

5). ನಂತರ ಮೊಬೈಲ್ ಸ್ಕ್ರೀನನ್ನು ಮೇಲಕ್ಕೆ ಸ್ವೈಪ್ ಮಾಡಿ ದಿಃ06-01-2020 ರ ಕಾಲ್ ರೆಕಾರ್ಡನ್ನು ಪರಿಶೀಲಿಸಲಾಗಿ ಮಧ್ಯಾಹ್ನ 3.43 ಗಂಟೆಯ ಸಮಯದಲ್ಲಿ ರೆಕಾರ್ಡ್ ಆಗಿದ್ದ ಕಾಲ್ ರೆಕಾರ್ಡ್ ಇದ್ದು, ಅದನ್ನು ಪರಿಶೀಲಿಸಲಾಗಿ Call Record VR 200106153725M4a, 5.56Mb ಎಂದು ಇದ್ದು, ಅದನ್ನು ಪ್ಲೇ ಮಾಡಲಾಗಿ ಆರೋಪಿಯು ತೆಲುಗು ಭಾಷೆಯಲ್ಲಿ ಮೃತ ರಾಧಿಕಾಳ ಜೊತೆ ಮಾತನಾಡಿರುವ ಸಂಭಾಷಣೆ ಇದ್ದು, ಸದರಿ ಸಂಭಾಷಣೆ ತೆಲುಗು ಭಾಷೆಯಲ್ಲಿದ್ದು, ಸದರಿ ವಿಚಾರವನ್ನು ಯಥಾವತ್ತಾಗಿ ಮಹಜರ್ ಕ್ರಮವನ್ನು ಜರುಗಿಸುವಾಗ

ನಮೂದು ಮಾಡಿದ್ದು, ನಂತರ ಅದರ ಅರ್ಥವನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಿದ್ದು, ಅದರಲ್ಲಿ ಆರೋಪಿಯು ನಿನಗೆ ಇಷ್ಟವಿಲ್ಲ ತಾನೇ ಡಿಸ್ಟರ್ಬ್ ಮಾಡುವುದಿಲ್ಲ ಬಿಡು, ಆಯ್ತು ಬಿಡಮ್ಮ, ನಾವೇ ಚೆನ್ನಾಗಿರುತ್ತೇವೆ ಬಿಡು, ತಿನ್ಕೊಂಡು, ಕುಡಿದುಕೊಂಡು ನಾನೇ ತಾನೇ ಇದ್ದದ್ದು, ನೋಡಿದ್ದೇನೆ ನಿನ್ನ ಅವತಾರನ, ಎಲ್ಲಾ ನೋಡಿದ್ದೇನೆ, ಯಾಕೆ ಇನ್ನೂ ನನಗೆ ಏನು ಹೇಳುತ್ತಿಯಾ, ಯಾವಾಗಲೋ ನೋಡ್ತೀನಿ ಆಯ್ತು ಎಂದು ಬೇರೆ ಬೇರೆ ವಿಚಾರವನ್ನು ಮಾತನಾಡಿ ಆರೋಪಿಯು ಮೃತ ಕುಮಾರಿ ರಾಧರವರೊಂದಿಗೆ ಹಿಂಸೆಯನ್ನು ನೀಡಿದ ಬಗ್ಗೆ ಆಡಿಯೋ ಇದ್ದು, ಸದರಿ ಆಡಿಯೋ ಕ್ಲಿಪ್ ನ ವಿವರವನ್ನು ಮಹಜರ್ ಕ್ರಮದಲ್ಲಿ ನಮೂದಿಸಿರುತ್ತೇನೆ.

6). ನಂತರ ಮತ್ತೊಂದು ಕಾಲ್ ರೆಕಾರ್ಡ್ ಇದ್ದು, ಮಧ್ಯಾಹ್ನ 3.55 ರ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106154607M4a, 8.17mb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಲಾಗಿ, ಸದರಿ ಸಂಭಾಷಣೆಯು ಕೂಡ ತೆಲುಗು ಭಾಷೆಯಲ್ಲಿದ್ದು, ಅದು ಆರೋಪಿ ಮತ್ತು ಮೃತ ರಾಧಳ ಮಧ್ಯೆ ಇರುತ್ತದೆ. ಸದರಿ ಸಂಭಾಷಣೆಯನ್ನು ಕೂಡ ಕನ್ನಡ ಭಾಷೆಗೆ ಯಥಾವತ್ತಾಗಿ ಅನುವಾದಿಸಿ, ಮಹಜರ್ ನಲ್ಲಿ ನಮೂದಿಸಿರುತ್ತೇನೆ. ಸದರಿ ಸಂಭಾಷಣೆಯಲ್ಲಿ ಆರೋಪಿಯು ಮೃತ ರಾಧಾಳಿಗೆ ಅವಾಚ್ಯ ಶಬ್ಧಗಳಿಂದ ಬೈದಿದ್ದು ಹಾಗೂ ಮಾನಸಿಕ ಹಿಂಸೆಯನ್ನು ನೀಡಿದ್ದ ಬಗ್ಗೆ ಕಂಡುಬರುತ್ತದೆ. ನಂತರ ಮತ್ತೊಂದು ಕಾಲ್ ರೆಕಾರ್ಡ್ ಇದ್ದು, ಮಧ್ಯಾಹ್ನ 4.24 ರ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106162119M4a, 3.18mb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಆರೋಪಿ ವೆಂಕಟೇಶ್ ಮತ್ತು ಮೃತ ರಾಧ ಮಾತನಾಡಿರುವ ಧ್ವನಿ ಇರುತ್ತದೆ. ನಂತರ ಮತ್ತೊಂದು ಕಾಲ್ ರೆಕಾರ್ಡ್ ಇದ್ದು, ಮಧ್ಯಾಹ್ನ 4.32 ರ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106162517M4a, 6.50mb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ

ಆರೋಪಿ ವೆಂಕಟೇಶ್ ಮತ್ತು ಮೃತ ರಾಧ ಮಾತನಾಡಿರುವ ಧ್ವನಿ ಇರುತ್ತದೆ. ನಂತರ ಮತ್ತೊಂದು ಕಾಲ್ ರೆಕಾರ್ಡ್ ಇದ್ದು, ಮಧ್ಯಾಹ್ನ 4.59 ರ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106165859M4a, 572kb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಆರೋಪಿ ವೆಂಕಟೇಶ್ ಮತ್ತು ಮೃತ ರಾಧ ಮಾತನಾಡಿರುವ ಧ್ವನಿ ಇರುತ್ತದೆ. ನಂತರ ಮತ್ತೊಂದು ಕಾಲ್ ರೆಕಾರ್ಡ್ ಇದ್ದು, ಮಧ್ಯಾಹ್ನ 6.03 ರ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106175806M4a, 5.04mb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಆರೋಪಿ ವೆಂಕಟೇಶ್ ಮತ್ತು ಮೃತ ರಾಧ ಮಾತನಾಡಿರುವ ಧ್ವನಿ ಇರುತ್ತದೆ. ಅದೇ ರೀತಿ ಸಂಜೆ 6.42, 6.43, 7.46 ಗಂಟೆಗೆ ರೆಕಾರ್ಡಿಂಗ್ಸ್ ಇದ್ದು, ಸದರಿ ರೆಕಾರ್ಡಿಂಗ್‌ಸ್ ಗಳನ್ನು ಪ್ಲೇ ಮಾಡಿ ನೋಡಲಾಗಿ, ಅವುಗಳಲ್ಲಿ ಆರೋಪಿ ವೆಂಕಟೇಶ್ ಮತ್ತು ಮೃತ ರಾಧ ಮಾತನಾಡಿರುವ ಧ್ವನಿ ಇರುತ್ತದೆ.

7). ನಂತರ ರಾತ್ರಿ 8.11 ಗಂಟೆ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106195934M4a, 11.06mb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಆರೋಪಿ ವೆಂಕಟೇಶ್ ಮತ್ತು ಮೃತ ರಾಧ ಮಾತನಾಡಿರುವ ಧ್ವನಿ ಇರುತ್ತದೆ, ಸದರಿ ಸಂಭಾಷಣೆಯಲ್ಲಿ ಆರೋಪಿಯು ಮೃತ ರಾಧರವರಿಗೆ ತೆಲುಗು ಭಾಷೆಯಲ್ಲಿ ಅವಾಚ್ಯ ಶಬ್ಧಗಳಿಂದ ಬೈದು, ಆಕೆಯ ಮೇಲೆ ಅನುಮಾನ ವ್ಯಕ್ತಪಡಿಸಿ ಮಾನಸಿಕ ಹಿಂಸೆ ಕೊಟ್ಟ ಬಗ್ಗೆ ಕಂಡುಬರುತ್ತದೆ. ಸದರಿ ಸಂಭಾಷಣೆಯನ್ನು ಕನ್ನಡ ಭಾಷೆಗೆ ಯಥಾವತ್ತಾಗಿ ತರ್ಜುಮೆ ಮಾಡಿ ಮಹಜರ್ ನಲ್ಲಿ ಟೈಪ್ ಮಾಡಿಸಿರುತ್ತೇನೆ.

8). ನಂತರ ರಾತ್ರಿ 8.17 ಗಂಟೆ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106201145M4a, 209kb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಆರೋಪಿ ವೆಂಕಟೇಶ್ ಮತ್ತು ಮೃತ ರಾಧ

ಮಾತನಾಡಿರುವ ಧ್ವನಿ ಇರುತ್ತದೆ, ಸದರಿ ಸಂಭಾಷಣೆಯಲ್ಲಿ ಆರೋಪಿಯು ಮೃತ ರಾಧರವರಿಗೆ ತೆಲುಗು ಭಾಷೆಯಲ್ಲಿ ಅವಾಚ್ಯ ಶಬ್ಧಗಳಿಂದ ಬೈದು ಆಕೆಗೆ ಮಾನಸಿಕ ಹಿಂಸೆ ಕೊಟ್ಟು ತೊಂದರೆ ಕೊಟ್ಟ ಬಗ್ಗೆ ಕಂಡುಬರುತ್ತದೆ. ಸದರಿ ಸಂಭಾಷಣೆಯನ್ನು ಕನ್ನಡ ಭಾಷೆಗೆ ಯಥಾವತ್ತಾಗಿ ತರ್ಜುಮೆ ಮಾಡಿ ಮಹಜರ್ ನಲ್ಲಿ ಟೈಪ್ ಮಾಡಿಸಿರುತ್ತೇನೆ.

9). ನಂತರ ರಾತ್ರಿ 8.31 ಗಂಟೆ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106202943M4a, 2.0mb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಆರೋಪಿ ವೆಂಕಟೇಶ್ ಮತ್ತು ಮೃತ ರಾಧ ಮಾತನಾಡಿರುವ ಧ್ವನಿ ಇರುತ್ತದೆ, ಸದರಿ ಸಂಭಾಷಣೆಯಲ್ಲಿ ಆರೋಪಿಯು ಮೃತ ರಾಧರವರಿಗೆ ತೆಲುಗು ಭಾಷೆಯಲ್ಲಿ ಆಕೆಯ ಫೋನ್ ಸ್ವಿಚ್ ಆಫ್ ಆಗಿದ್ದರಿಂದ ಆಕೆಯ ಮೇಲೆ ಅನುಮಾನ ವ್ಯಕ್ತಪಡಿಸಿ ಮಾನಸಿಕ ಹಿಂಸೆ ಕೊಟ್ಟ ಬಗ್ಗೆ ಕಂಡುಬರುತ್ತದೆ. ಸದರಿ ಸಂಭಾಷಣೆಯನ್ನು ಕನ್ನಡ ಭಾಷೆಗೆ ಯಥಾವತ್ತಾಗಿ ತರ್ಜುಮೆ ಮಾಡಿ ಮಹಜರ್ ನಲ್ಲಿ ಟೈಪ್ ಮಾಡಿಸಿರುತ್ತೇನೆ.

10). ನಂತರ ರಾತ್ರಿ 8.43 ಗಂಟೆ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106204236M4a, 0.94mb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಆರೋಪಿ ವೆಂಕಟೇಶ್ ಮತ್ತು ಮೃತ ರಾಧ ಮಾತನಾಡಿರುವ ಧ್ವನಿ ಇರುತ್ತದೆ, ಸದರಿ ಸಂಭಾಷಣೆಯಲ್ಲಿ ಆರೋಪಿಯು ಮೃತ ರಾಧರವರಿಗೆ ತೆಲುಗು ಭಾಷೆಯಲ್ಲಿ ಆಕೆಯ ಫೋನ್ ಬ್ಯುಸಿ ಬರುತ್ತಿದ್ದರಿಂದ, ಆಕೆ ಯಾರದ್ದೋ ಜೊತೆಯಲ್ಲಿ ಮಾತನಾಡುತ್ತಿರುವ ಬಗ್ಗೆ, ಆಕೆಯ ಮೇಲೆ ಅನುಮಾನ ವ್ಯಕ್ತಪಡಿಸಿ ಮಾನಸಿಕ ಹಿಂಸೆ ಕೊಟ್ಟ ಬಗ್ಗೆ ಕಂಡುಬರುತ್ತದೆ. ಸದರಿ ಸಂಭಾಷಣೆಯನ್ನು ಕನ್ನಡ ಭಾಷೆಗೆ ಯಥಾವತ್ತಾಗಿ ತರ್ಜುಮೆ ಮಾಡಿ ಮಹಜರ್ ನಲ್ಲಿ ಟೈಪ್ ಮಾಡಿಸಿರುತ್ತೇನೆ.

11). ನಂತರ ರಾತ್ರಿ 8.44 ಗಂಟೆ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106204352M4a, 713kb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಆರೋಪಿ ವೆಂಕಟೇಶ್ ಮತ್ತು ಮೃತ ರಾಧ ಮಾತನಾಡಿರುವ ಧ್ವನಿ ಇರುತ್ತದೆ, ಸದರಿ ಸಂಭಾಷಣೆಯಲ್ಲಿ ಆರೋಪಿಯು ಮೃತ ರಾಧರವರಿಗೆ ತೆಲುಗು ಭಾಷೆಯಲ್ಲಿ ಮೃತ ರಾಧಳನು ಕುರಿತು ಯಾರೊಂದಿಗೆ ನೀನು ಮಾತನಾಡುತ್ತಿದ್ದೆ ಸರಿಯಾಗಿ ಹೇಳು ಎಂದು ಆಕೆಯ ಮೇಲೆ ಅನುಮಾನ ವ್ಯಕ್ತಪಡಿಸಿ ಮಾನಸಿಕ ಹಿಂಸೆ ಕೊಟ್ಟ ಬಗ್ಗೆ ಕಂಡುಬರುತ್ತದೆ. ಸದರಿ ಸಂಭಾಷಣೆಯನ್ನು ಕನ್ನಡ ಭಾಷೆಗೆ ಯಥಾವತ್ತಾಗಿ ತರ್ಜುಮೆ ಮಾಡಿ ಮಹಜರ್ ನಲ್ಲಿ ಟೈಪ್ ಮಾಡಿಸಿರುತ್ತೇನೆ.

12). ನಂತರ ರಾತ್ರಿ 9.14 ಗಂಟೆ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106204952M4a, 13.04mb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಆರೋಪಿ ವೆಂಕಟೇಶ್ ಮತ್ತು ಮೃತ ರಾಧ ಮಾತನಾಡಿರುವ ಧ್ವನಿ ಇರುತ್ತದೆ, ಸದರಿ ಸಂಭಾಷಣೆಯಲ್ಲಿ ಆರೋಪಿಯು ಮೃತ ರಾಧರವರಿಗೆ ತೆಲುಗು ಭಾಷೆಯಲ್ಲಿ ಯಾರೊಂದಿಗೆ ಮಾತನಾಡುತ್ತಿದ್ದೀಯಾ, ಮಚ್ಚಿಗ ಎಂಬುವವನ ಜೊತೆ ಮಾತನಾಡುತ್ತಿದ್ದೀಯಾ, ನನಗೆ ತಡೆದುಕೂಳ್ಳಲು ಸಾಧ್ಯವಿಲ್ಲ, ನಾನು ಯಾವಾಗ ಫೋನ್ ಮಾಡಿದರೂ ಬ್ಯುಸಿ ಬ್ಯುಸಿ ಬರುತ್ತದೆ, ಇವೆಲ್ಲಾ ಬೇಡ, ನಾವಿಬ್ಬರೂ ಸತ್ತುಹೋಗೋಣ ಬಾ ಎಂದು ಹೇಳಿ ಆಕೆಯನ್ನು ಆತ್ಮಹತ್ಯೆ ಮಾಡಿಕೊಳ್ಳುವಂತೆ ಪ್ರೇರೇಪಿಸಿದ ಬಗ್ಗೆ ಕಂಡುಬರುತ್ತದೆ. ಸದರಿ ಸಂಭಾಷಣೆಯನ್ನು ಕನ್ನಡ ಭಾಷೆಗೆ ಯಥಾವತ್ತಾಗಿ ತರ್ಜುಮೆ ಮಾಡಿ ಮಹಜರ್ ನಲ್ಲಿ ಟೈಪ್ ಮಾಡಿಸಿರುತ್ತೇನೆ.

13). ನಂತರ ರಾತ್ರಿ 9.31 ಗಂಟೆ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106211434M4a, 13.04mb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಆರೋಪಿ ವೆಂಕಟೇಶ್ ಮತ್ತು

ಮೃತ ರಾಧ ಮಾತನಾಡಿರುವ ಧ್ವನಿ ಇರುತ್ತದೆ, ಸದರಿ ಸಂಭಾಷಣೆಯಲ್ಲಿ ಆರೋಪಿಯು ಮೃತ ರಾಧರವರಿಗೆ ತೆಲುಗು ಭಾಷೆಯಲ್ಲಿ ಅವಾಚ್ಯ ಶಬ್ಧಗಳಿಂದ ಬೈದು ಹಾಗೂ ಆಕೆಗೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರೇರೇಪಣೆ ನೀಡಿ, ವಿಷವನ್ನು ತರುತ್ತೇನೆ, ಸಾಯೋಣ, ಇಲ್ಲವೆಂದರೆ ಯಾರ ಹತ್ತಿರ ಮಾತನಾಡುತ್ತಿದ್ದೀಯಾ ಹೇಳು ಎಂದು ಹಿಂಸೆ ನೀಡಿ, ನಾನು ವಿಷ ತರುತಿದ್ದೇನೆ, ನೀನು ಸಾಯಬೇಕು ಇಲ್ಲ ನಾನು ಸಾಯಬೇಕು ಎಂದು, ನಾನು ನಿನ್ನನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತೇನೆ, ವಿಷ ತರುತ್ತಿದ್ದೇನೆ, ಇಬ್ಬರೂ ಕುಡಿಯೋಣ, ನೀನು ಸಾಯದೇ ಇದ್ದರೇ ನೀನೇನೂ ತಪ್ಪು ಮಾಡಿಲ್ಲ ಎಂದು ಪ್ರೇರೇಪಣೆ ಮಾಡಿ, ನನ್ನ ಹತ್ತಿರ ಆಟ ಆಡುತ್ತಿದ್ದೀಯಾ, ಇಲ್ಲ ನೀನು ಸಾಯಬೇಕು ಇಲ್ಲ ನಾನು ಸಾಯಬೇಕು ಎಂದು ಪ್ರೇರೇಪಿಸಿ ಮಾನಸಿಕ ಹಿಂಸೆಯನ್ನು ಕೊಟ್ಟು, ನಾನು ಪೂರಿಯನ್ನು ಕೇಳಿದೆ ಹಾಗೂ ಅಂಜಿ ಮಾಮನನ್ನು ಕೇಳಿದೆ, ಅವರಿಬ್ಬರೂ ತಾವುಗಳು ಕಾಲ್ ಮಾಡಿರುವುದಿಲ್ಲ ಎಂದು ಹೇಳಿದ್ದು, ನೀನು ಯಾರ ಜೊತೆ ಮಾತನಾಡುತ್ತಿದ್ದೀಯಾ ಹೇಳು ಎಂದು ಹಿಂಸೆ ಕೊಟ್ಟು ಆಕೆಗೆ ಫೋನ್ ನಲ್ಲೇ ವಿಷ ಕುಡಿಯಲು ನೀರು ತೆಗೆದುಕೊಂಡು ಬಾ, ಕುಡಿ, ಇವತ್ತು ನೀನು ಯಾವನ ಹತ್ತಿರನೂ ಮಾತನಾಡಿಲ್ಲ ಅಂದರೆ ಸಾಯಲ್ಲ, ಮಾತನಾಡಿದ್ದೀಯಾ ಎಂದರೆ ಸತ್ತು ಹೋಗುತ್ತೀಯಾ ಎಂದು ಹೇಳಿ ಅವಾಚ್ಯ ಶಬ್ಧಗಳಿಂದ ಬೈದಿರುವ ಬಗ್ಗೆ ಕಂಡುಬರುತ್ತದೆ. ಸದರಿ ಸಂಭಾಷಣೆಯನ್ನು ಕನ್ನಡ ಭಾಷೆಗೆ ಯಥಾವತ್ತಾಗಿ ತರ್ಜುಮೆ ಮಾಡಿ ಮಹಜರ್ ನಲ್ಲಿ ಟೈಪ್ ಮಾಡಿಸಿರುತ್ತೇನೆ.

14). ನಂತರ ರಾತ್ರಿ 10.05 ಗಂಟೆ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106220351M4a, 1.61mb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಆರೋಪಿ ವೆಂಕಟೇಶ್ ಸಾಂಬ ಅಲಿಯಾಸ್ ಮಹೇಂದ್ರ ಎಂಬುವವರಿಗೆ ಫೋನ್ ಮಾಡಿ, ತೆಲುಗು ಭಾಷೆಯಲ್ಲಿ ನಾನು ಮತ್ತು ಮೃತ ರಾಧ ಇಬ್ಬರು ವಿಷ ಕುಡಿದಿದ್ದೇವೆ ಹಾಗೂ ರಾಧಳಿಗೆ ವಿಷ

ಕುಡಿಸಿರುವ ಬಗ್ಗೆ ಮಾತನಾಡಿರುವ ಬಗ್ಗೆ ಸಂಭಾಷಣೆ ಇರುವುದು ಕಂಡುಬರುತ್ತದೆ. ಸದರಿ ಸಂಭಾಷಣೆಯನ್ನು ಕನ್ನಡ ಭಾಷೆಗೆ ಯಥಾವತ್ತಾಗಿ ತರ್ಜುಮೆ ಮಾಡಿ ಮಹಜರ್ ನಲ್ಲಿ ಟೈಪ್ ಮಾಡಿಸಿರುತ್ತೇನೆ.

15). ನಂತರ ರಾತ್ರಿ 10.08 ಗಂಟೆ ಸಮಯದಲ್ಲಿ ರೆಕಾರ್ಡ್ ಆಗಿರುವ ಕಾಲ್ ರೆಕಾರ್ಡಿಂಗ್ VR200106220543M4a, 2.60mb ಎಂದು ಇರುವ ರೆಕಾರ್ಡಿಂಗನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಆರೋಪಿ ವೆಂಕಟೇಶ್ ತನ್ನ ಸ್ನೇಹಿತ ಮಹೇಂದ್ರ ಎಂಬುವವರಿಗೆ ಫೋನ್ ಮಾಡಿ, ತೆಲುಗು ಭಾಷೆಯಲ್ಲಿ ಇವತ್ತು ಅವಳು ಇರಲ್ಲ, ಸತ್ತೋಗುತ್ತಾಳೆ, ನಾನು ವಿಷವನ್ನು ಕುಡಿದಿದ್ದೀನಿ ಎಂದು ಸಂಭಾಷಣೆ ಇರುವುದು ಕಂಡುಬರುತ್ತದೆ. ಸದರಿ ಸಂಭಾಷಣೆಯನ್ನು ಕನ್ನಡ ಭಾಷೆಗೆ ಯಥಾವತ್ತಾಗಿ ತರ್ಜುಮೆ ಮಾಡಿ ಮಹಜರ್ ನಲ್ಲಿ ಟೈಪ್ ಮಾಡಿಸಿರುತ್ತೇನೆ.

16). ಸದರಿ ಸಂಭಾಷಣೆಯು ತನ್ನ ಮೊಬೈಲ್ ಫೋನ್ ನಲ್ಲಿ ಇದ್ದದ್ದನ್ನು ಆರೋಪಿ ಒಪ್ಪಿಕೊಂಡಿದ್ದು ಹಾಗೂ ಸದರಿ ಸಂಭಾಷಣೆಯಲ್ಲಿ ಇದ್ದ ಧ್ವನಿ ತನ್ನದೇ ಹಾಗೂ ಸ್ಪಷ್ಟವಾಗಿ ಕೇಳಿಸದೇ ಇರುವ ಧ್ವನಿ ಮೃತ ರಾಧಾಳದ್ದು ಆಗಿರುವುದಾಗಿ ಆರೋಪಿಯು ತಿಳಿಸಿದ್ದು, ಕೊನೆಯದಾಗಿ ಮಾತನಾಡಿದ ಎರಡು ಕರೆಯ ಧ್ವನಿಗಳು ತನ್ನ ಸ್ನೇಹಿತ ಮಹೇಂದ್ರನದ್ದಾಗಿರುತ್ತದೆ ಎಂದು ತಿಳಿಸಿರುತ್ತಾನೆ. ನಂತರ ಮೊಬೈಲ್‌ನಲ್ಲಿ ಗೂಗಲ್ ಡ್ರೈವ್ ನಲ್ಲಿದ್ದ ಫೋಟೋಗಳನ್ನು Disc digger Photo recovery Application ಮುಖಾಂತರ ಡಿಲೀಟ್ ಮಾಡಿದ ಫೋಟೇಗಳನ್ನು ರೆಕವರಿ ಮಾಡಿದ ನಂತರ ಕಛೇರಿಯಲ್ಲಿದ್ದ ಕಂಪ್ಯೂಟರ್ ಮುಖಾಂತರ ಫೋಟೋಗಳನ್ನು ಡಿವಿಡಿ ಡಿಸ್ಕ್ ಗೆ ಕಾಪಿ ಮಾಡಿಸಿರುತ್ತೇನೆ. ಹಾಗೂ ಫೋನ್ ನಲ್ಲಿರುವ ಆರೋಪಿ ಹಾಗೂ ಮೃತ ಬಾಲಕಿ ರಾಧರವರು ಮಾತನಾಡಿರುವ ಆಯ್ದು ಕೆಲವು ಕಾಲ್ ರೆಕಾರ್ಡಿಂಗ್ಸ್ ಗಳನ್ನು ಮತ್ತೊಂದು ಡಿವಿಡಿ ಡಿಸ್ಕ್ ಗೆ ಕಾಪಿ ಮಾಡಿಸಿರುತ್ತೇನೆ. ಎರಡು ಡಿವಿಡಿ ಡಿಸ್ಕ್ ಗಳನ್ನು ಪ್ರತ್ಯೇಕವಾಗಿ ಕವರ್ ಗಳಲ್ಲಿ ಹಾಕಿ ಅರಗು ಸೀಲು ಮಾಡಿ, “B” ಎಂಬ ಅಕ್ಷರದಿಂದ

ಸೀಲು ಮಾಡಿ ಹಾಗೂ ಆರೋಪಿ ಬಾಬ್ತು ಮೊಬೈಲನ್ನು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ, ಮೂತಿಯನ್ನು ದಾರದಿಂದ ಕಟ್ಟಿ "B" ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇನೆ. ಎರಡು ಡಿವಿಡಿ ಡಿಸ್ಕ್ ಹಾಗೂ ಆರೋಪಿಯ ಮೊಬೈಲನ್ನು ಮುಂದಿನ ತನಿಖೆಗಾಗಿ ಪಂಚರ ಸಮಕ್ಷಮ ನಿಪಿ–9 ರಂತೆ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಈ ವೇಳೆ ನಿಪಿ–10 ರಂತೆ ಮೊಬೈಲಿನ ಫೋಟೋ ಹಾಗೂ ಮಹಜರ್ ಕ್ರಮ ಜರುಗಿಸುವಾಗ ಫೋಟೋಗಳನ್ನು ತೆಗೆಯಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಮಧ್ಯಾಹ್ಞ 12.30 ರಿಂದ ಸಂಜೆ 5.30 ಗಂಟೆಯವರೆಗೆ ನನ್ನ ವೃತ್ತ ಕಛೇರಿಯಲ್ಲಿ ಪಂಚರ ಸಮಕ್ಷಮ ಟೈಪ್ ಮಾಡಿಸಿ, ಪಂಚರ ಹಾಗೂ ಆರೋಪಿಯ ಸಹಿಯನ್ನು ಪಡೆದುಕೊಂಡಿರುತ್ತೇನೆ. ಈಗ ಸಾಕ್ಷಿ ಸದರಿ ಪಂಚನಾಮೆಯನ್ನು ನೋಡಿದ್ದು, ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ–9(ಸಿ) ಎಂದು ಗುರುತಿಸಲಾಯಿತು. ನಂತರ ಅಮಾನತ್ತುಪಡಿಸಿಕೊಂಡ ಮಾಲುಗಳಿಗೆ ಠಾಣಾ ಪಿಎಫ್ ನಂಬರ್ಃ9/2020 ಎಂದು ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತೇನೆ. ಆರೋಪಿಗೆ ಸಂಬಂಧಿಸಿದಂತೆ ಮೊಬೈಲ್ ಫೋನ್ ನಿಂದ ಡೌನ್ಲೋಡ್ ಆಗಿದ್ದ ವಾಯ್ಸ್ ರೆಕಾರ್ಡಿಂಗ್ಸಗಳನ್ನು ಡಿವಿಡಿಗೆ ಕಾಪಿ ಮಾಡಿ ಅಮಾನತ್ತುಪಡಿಸಿಕೊಂಡ ಡಿವಿಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಈಗಾಗಲೇ ಮು.ಮಾ–2 ಎಂದು ಗುರುತಿಸಲಾಗಿರುತ್ತದೆ. ಆರೋಪಿ ಮೊಬೈಲ್ ಫೋನ್ ನಿಂದ ಡೌನ್ಲೋಡ್ ಮಾಡಿದ ಫೋಟೋಗಳನ್ನು ಡಿವಿಡಿಗೆ ಕಾಪಿ ಮಾಡಿ ಅಮಾನತ್ತುಪಡಿಸಿಕೊಂಡ ಡಿವಿಡಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ–8 ಎಂದು ಗುರುತಿಸಲಾಯಿತು. ಆರೋಪಿಯಿಂದ ಅಮಾನತ್ತುಪಡಿಸಿಕೊಂಡ ಮೊಬೈಲ್ ಫೋನನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಈಗಾಗಲೇ ಮು.ಮಾ–4 ಎಂದು ಗುರುತಿಸಲಾಗಿರುತ್ತದೆ.

17). ನಂತರ ಅದೇ ದಿನ ಸಾಕ್ಷಿದಾರರಾದ ರಾಮಾಂಜಿನಮ್ಮ, ಗೋಪಾಲಕೃಷ್ಣ, ಮುನೇಂದ್ರ, ಪ್ರಕಾಶ, ಫಾರುಕ್ ಪಾಶ, ಗಂಗಾಧರ, ರಾಜು, ರಾಧಮ್ಮ, ಆಂಜಿನಪ್ಪ, ಮುನಿವೆಂಕಟಪ್ಪ, ಸೋಮಶೇಖರ ಮತ್ತು ಮಹಿಳಾ ಪೇದೆ–248 ಶ್ವೇತ, ಸಿಪಿಸಿ–537 ಆನಂದ, ಹೆಚ್.ಸಿ–59 ಶ್ರೀನಿವಾಸಪ್ಪರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಯನ್ನು ಸುರಕ್ಷಿತ ಬಂಧನದಲ್ಲಿಟ್ಟು, ಸುರಕ್ಷಿತ ಬಂಧನಕ್ಕೆ ಸಿಬ್ಬಂದಿಯನ್ನು ನೇಮಿಸಿರುತ್ತೇನೆ. ದಿಃ13–01–2020ರಂದು ಆರೋಪಿಯನ್ನು ರಿಮ್ಯಾಂಡ್ ಯಾದಿಯೊಂದಿಗೆ ಘನ ನ್ಯಾಯಾಲಯದ ಮುಂದೆ ಹಾಜರುಪಡಿಸಿ, ತನಿಖೆಗೆ ಅವಶ್ಯಕತೆ ಇದ್ದರಿಂದ 2 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆದುಕೊಂಡಿರುತ್ತೇನೆ. ಅದೇ ದಿನ ಠಾಣೆಗೆ ಪಂಚರಾದ ಪ್ರಸನ್ನ ಕುಮಾರ್ ಮತ್ತು ಶಬ್ಬೀರ್ ರವರನ್ನು ಕಛೇರಿಗೆ ಕರೆಯಿಸಿಕೊಂಡು ಆರೋಪಿಯು ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಕುಮಾರಿ ರಾಧಾಳನ್ನು ಸಾಯಿಸಲು ಇಲಿ ಪಾಶಾಣವನ್ನು ತೆಗೆದುಕೊಂಡು ಬಂದಂತಹ ಸ್ಥಳ, ಇಲಿ ಪಾಶಾಣವನ್ನು ಕುಡಿಸಿದ ಸ್ಥಳ ಹಾಗೂ ತಾನು ಇಲಿ ಪಾಶಾಣವನ್ನು ಕುಡಿದಂತೆ ನಟಿಸಿ, ಬಾಯಿಗೆ ಸವರಿಕೊಂಡು, ಮಿಕ್ಕ ಇಲಿ ಪಾಶಾಣವನ್ನು ಬಿಸಾಡಿದ ಸ್ಥಳ ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ, ಆರೋಪಿಯನ್ನು ಹಾಗೂ ಪಂಚರನ್ನು ನಮ್ಮ ಇಲಾಖಾ ಜೀಪಿನಲ್ಲಿ ಆರೋಪಿ ಹೇಳಿದಂತೆ ತೊಂಡೇಭಾವಿ ರೈಲ್ವೇ ಸ್ಟೇಷನ್ ಬಳಿ ಕರೆದುಕೊಂಡು ಹೋಗಿ, ಆರೋಪಿಯು ಜೀಪನ್ನು ಮಂಚೇನಹಳ್ಳಿ ರಸ್ತೆಯ ಕಡೆಗೆ ತಿರುಗಿಸುವಂತೆ ಹೇಳಿದ್ದು, ಸ್ವಲ್ಪ ಮುಂದೆ ಹೋದಾಗ ಜೀಪನ್ನು ನಿಲ್ಲಿಸುವಂತೆ ಹೇಳಿದ್ದು, ನಂತರ ನಾವುಗಳು ಇಳಿದಾಗ ಆರೋಪಿಯು ಮುಂದೆ ನಡೆದುಕೊಂಡು ಹೋಗಿ ಒಂದು ಅಂಗಡಿಯನ್ನು ತೋರಿಸಿ, ಸದರಿ ಅಂಗಡಿಯಲ್ಲಿ ತಾನು ದಿನಾಂಕಃ06–01–2020ರಂದು ರಾತ್ರಿ ಸುಮಾರು 8.15 ಗಂಟೆಯಲ್ಲಿ ಇಲಿ ಪಾಶಾಣವನ್ನು ತೆಗೆದುಕೊಂಡ ಸ್ಥಳ ಇದೇ ಎಂದು ತೋರಿಸಿದ್ದು, ಸದರಿ ಅಂಗಡಿಯ ಮಾಲೀಕ ಬಾಬಾಜಾನ್ ಇದ್ದು,

ಆರೋಪಿಯನ್ನು ಗುರುತಿಸಿ, ಸದರಿಯವರು ಆರೋಪಿಯು ತಮ್ಮ ಅಂಗಡಿಗೆ ದಿಃ06.01.2020ರ ರಾತ್ರಿ 8.15 ಗಂಟೆಗೆ ಬಂದು ಇಲಿ ಪಾಶಾಣವನ್ನು ಖರೀಧಿ ಮಾಡಿಕೊಂಡು ಹೋದ ಬಗ್ಗೆ ತಿಳಿಸಿರುತ್ತಾರೆ. ನಂತರ ಮತ್ತೊಂದು ಬಾರಿ ಆರೋಪಿಯ ತಮ್ಮ ಪುರುಶೋತ್ತಮ ಮತ್ತೊಂದು ಡಬ್ಬಿ ಇಲಿ ಪಾಶಾಣವನ್ನು ತೆಗದುಕೊಂಡು ಹೋದ ಬಗ್ಗೆ ತಿಳಿಸಿರುತ್ತಾರೆ.

18). ನಂತರ ಇದೇ ಪಂಚರೊಂದಿಗೆ ಆರೋಪಿಯು ತಾನು ಇಲಿ ಪಾಶಾಣ ಬಾಯಿಗೆ ಸವರಿಕೊಂಡ ಸ್ಥಳವನ್ನು ತೋರಿಸುತ್ತೇನೆ ಎಂದು ತಿಳಿಸಿದ್ದು, ನಂತರ ನಮ್ಮ ಇಲಾಖಾ ಜೀಪಿನಲ್ಲಿ ಎಲ್ಲರೂ ಕುಳಿತುಕೊಂಡು ತೊಂಡೇಭಾವಿ ರೈಲ್ವೆಸ್ಟೇಷನ್ ಇಂದ ನಾವೆಲ್ಲರೂ ಹೊರಟು, ತಾಮಲಪುರ ಬಳಿ ಬಂದು ರಸ್ತೆಯ ಎಡಬದಿಯಲ್ಲಿ ಜೀಪನ್ನು ಆರೋಪಿ ನಿಲ್ಲಿಸಲು ಹೇಳಿದ್ದು, ಅಲ್ಲಿ ಎಲ್ಲರೂ ಇಳಿದು, ನಂತರ ನಮ್ಮನ್ನು ಆರೋಪಿಯು ಗುಜರಿ ನಾರಾಯಣಸ್ವಾಮಿರವರಿಗೆ ಸೇರಿದ ಜಮೀನಿನ ಬಳಿ ಕರೆದುಕೊಂಡು ಹೋಗಿ, ದಿನಾಂಕಃ06-01-2020ರಂದು ರಾತ್ರಿ 9.45 ಗಂಟೆ ಸಮಯದಲ್ಲಿ ತಾನು ಇಲಿ ಪಾಶಾಣವನ್ನು ಬಾಯಿಗೆ ಸವರಿಕೊಂಡ ಸ್ಥಳ ಇದೇ ಎಂದು ತೋರಿಸಿದ್ದು, ಸದರಿ ಸ್ಥಳವನ್ನು ಪರಿಶೀಲನೆ ಮಾಡಲಾಗಿ, ಸದರಿ ಜಾಗವು ಗುಜರಿ ನಾರಾಯಣಸ್ವಾಮಿರವರಿಗೆ ಸೇರಿದ ಜಮೀನಾಗಿರುತ್ತದೆ. ಅಲ್ಲೇ ಸ್ಥಳದಲ್ಲಿ ಆರೋಪಿಯು ಬಿಸಾಡಿದ್ದ ಒಂದು ಡಬ್ಬಿ ಹಾಗೂ ಮುಚ್ಚಳವನ್ನು ಆರೋಪಿಯು ತೆಗೆದುಕೊಟ್ಟಿದ್ದು, ಅದನ್ನು ಪರಿಶೀಲಿಸಲಾಗಿ ಅದು ಬಿಳಿ ಬಣ್ಣದ ಚಿಕ್ಕ ಡಬ್ಬಿಯಾಗಿದ್ದು, ಅದರಲ್ಲಿ ಸ್ವಲ್ಪ ಕಪ್ಪು ಬಣ್ಣದ ಇಲಿ ಪಾಶಾಣದ ಪುಡಿ ಇರುತ್ತದೆ. ಸದರಿ ಮುಚ್ಚಳ ಕೆಂಪು ಬಣ್ಣದಿಂದ ಕೂಡಿದ್ದು, ಸದರಿ ಡಬ್ಬಿಯನ್ನು ಮುಚ್ಚಳದಿಂದ ಮುಚ್ಚಿ, ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ "F" ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇನೆ. ನಂತರ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಸ್ವಲ್ಪ ಮಾತ್ರ ಇಲಿ ಪಾಶಾಣವನ್ನು ಬಾಯಿಗೆ ಸವರಿಕೊಂಡ ಉಳಿದುದನ್ನು ಹೊಲದಲ್ಲೇ ಬಿಸಾಕಿರುವುದಾಗಿ ತಿಳಿಸಿದ್ದು,

ನೆಲದ ಮೇಲೆ ಡಬ್ಬಿ ಬಿದ್ದಿದ್ದ ಸ್ಥಳದಲ್ಲಿ ಸ್ವಲ್ಪ ಮಣ್ಣು ಮತ್ತು ಮಾದರಿ ಮಣ್ಣನ್ನು ತೆಗೆದುಕೊಂಡು ಪ್ರತ್ಯೇಕವಾಗಿ ಪ್ಲಾಸ್ಟಿಕ್ ಡಬ್ಬಿಗಳಲ್ಲಿ ಶೇಖರಿಸಿ, ಬಿಳಿ ಬಟ್ಟೆಯ ಚೀಲದಲ್ಲಿ ಇಟ್ಟು, "F" ಎಂಬ ಅಕ್ಷರದಿಂದ ಸೀಲು ಮಾಡಿ, ಸರಿದ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಎಫ್.ಎಸ್.ಎಲ್ ಗೆ ಕಳುಹಿಸಿಕೊಡಲು ನನ್ನ ವಶದಲ್ಲಿ ಇಟ್ಟುಕೊಂಡಿರುತ್ತೇನೆ.

19). ನಂತರ ಪಂಚನಾಮೆಯನ್ನು ಮುಂದುವರೆಸಿ, ದಿನಾಂಕಃ06-01-2020ರ 9.30 ಗಂಟೆಯ ಸಮಯದಲ್ಲಿ ಕುಮಾರಿ ಮೃತ ರಾಧಳಿಗೆ ಇಲಿ ಪಾಶಾಣವನ್ನು ಕುಡಿಸಿದ ಸ್ಥಳವನ್ನು ತೋರಿಸುತ್ತೇನೆ ಎಂದು ಆರೋಪಿಯು ತಾಮಲಾಪುರ ಗ್ರಾಮದ ಮುಖ್ಯ ರಸ್ತೆಗೆ ಮುಂದೆ ನಡೆದುಕೊಂಡು ಹೋಗಿ ಬಲಕ್ಕೆ ತಿರುಗಿ, ಸ್ವಲ್ಪ ಮುಂದೆ ಹೋಗಿ ಪುನಃ ಬಲಕ್ಕೆ ತಿರುಗಿ ಒಂದು ಮನೆಯ ಪಕ್ಕದಲ್ಲಿರುವ ಸಂಧಿಯ ಬಳಿ ಹೋಗಿ ಇದೇ ಜಾಗದಲ್ಲಿಯೇ ದಿನಾಂಕಃ06-01-2020ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ಕುಮಾರಿ ರಾಧಳಿಗೆ ಇಲಿ ಪಾಶಾಣವನ್ನು ಕುಡಿಸಿದ ಸ್ಥಳವಾಗಿರುತ್ತದೆ ಎಂದು ತೋರಿಸಿದ ಸ್ಥಳವನ್ನು ಪರಿಶೀಲಿಸಲಾಗಿ, ಅದು ತಾಮಾಲಾಪುರದ ವಾಸಿ ಫಿರ್ಯಾದಿ ಕೊಂಡಪ್ಪ ಹಾಗೂ ರಾಜಪ್ಪರವರಿಗೆ ಸೇರಿದ ಮನೆ ನಡುವೆ ಇರುವ ಸುಮಾರು 4 ಅಡಿಯ ಸಂಧಿ ಖಾಲಿ ಜಾಗವಾಗಿರುತ್ತದೆ.

20). ಮೇಲ್ಕಂಡ ಎಲ್ಲಾ ವಿದ್ಯಮಾನಗಳನ್ನು ನಿಪಿ-15ರ ಮಹಜರನ್ನು ಮಧ್ಯಾಹ್ನ 3.45 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಪಂಚರ ಸಮಕ್ಷಮ ಕೈಗೊಳ್ಳಲಾಗಿರುತ್ತದೆ. ಈಗ ಸಾಕ್ಷಿ ಸದರಿ ಮಹಜರನ್ನು ನೋಡಿ, ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-15(ಬಿ) ಎಂದು ಗುರುತಿಸಲಾಯಿತು. ನಂತರ ಕಛೇರಿಗೆ ಹಿಂದಿರುಗಿ ನಿಪಿ-15ರಂತೆ ಅಮಾನತ್ತುಪಡಿಸಿಕೊಂಡ ವಸ್ತುಗಳಿಗೆ ಠಾಣಾ ಪಿಎಫ್ ನಂಃ10/2020 ಎಂದು ಅಳವಡಿಸಿರುತ್ತೇನೆ. ಈಗ ಸಾಕ್ಷಿ ಅಮಾನತ್ತುಪಡಿಸಿಕೊಂಡ ಇಲಿ ಪಾಶಾಣದ ಡಬ್ಬಿ, ಇಲಿ

ಪಾಶಾಣದ ಡಬ್ಬಿ ಬಿದ್ದಿದ್ದ ಸ್ಥಳದ ಮಣ್ಣು ಹಾಗೂ ಮಾದರಿ ಮಣ್ಣನ್ನು ನೋಡಿ ಗುರುತಿಸಿದ್ದು, ಅವುಗಳು ಈಗಾಗಲೇ ಮು.ಮಾ–5 ರಿಂದ ಮು.ಮಾ–7 ಎಂದು ಗುರುತಿಸಲಾಗಿರುತ್ತದೆ. ಅದೇ ದಿನ ಸಾಕ್ಷಿದಾರರಾದ ಶ್ರೀಮತಿ ಮಂಜುಳ, ಶಬ್ಬೀರ್ ಮತ್ತು ಪ್ರಸನ್ನ ಕುಮಾರ್ ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಯನ್ನು ಸುರಕ್ಷಿತ ಬಂಧನದಲ್ಲಿಟ್ಟು, ಸುರಕ್ಷಿತ ಬಂಧನಕ್ಕಾಗಿ ನನ್ನ ಸಿಬ್ಬಂದಿಯನ್ನು ನೇಮಕ ಮಾಡಿರುತ್ತೇನೆ.

(**ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದು ಹಾಗೂ ಸಾಕ್ಷಿದಾರರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು**).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
**(ಎನ್.ವಿ. ಭವಾನಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.